

### ಶಾಂಕರ ಭಾಷ್ಯಸಮೇತ

# ಈಶಾವಾಸ್ಯ ಉಪನಿಷತ್ತು

ಸ್ವಾಮಿ ವೀರೇಶಾನಂದ



(ಮೂಲ, ಪದಾರ್ಥ, ಅನುವಾದ, ಶಂಕರಭಾಷ್ಯದ ಮೂಲ, ಶಂಕರಭಾಷ್ಯದ ಅನುವಾದ ಹಾಗೂ ಟಿಪ್ಪಣಿಗಳು)

### ಭಾಗ ೩

**ಭಾಷ್ಯ : ಏವಮ್ ಆತ್ಮವಿದಃ ಪುತ್ರಾದಿ ಏಷಣಾತ್ರಯಸಂನ್ಯಾಸೇನ ಆತ್ಮಜ್ಞಾನನಿಷ್ಠತಯಾ ಆತ್ಮಾ ರಕ್ಷಿತವ್ಯಃ ಇತಿ ಏಷಃ ವೇದಾರ್ಥಃ। ಅಥ ಇತರಸ್ಯ ಅನಾತ್ಮಜ್ಞತಯಾ ಆತ್ಮಗ್ರಹಣ ಅಶಕ್ತಸ್ಯ ಇದಮ್ ಉಪದಿಶತಿ ಮಂತ್ರಃ।**

ಹೀಗೆ ಆತ್ಮಜ್ಞಾನಿಯು ಪುತ್ರ, ವಿತ್ತ ಮತ್ತು ಲೋಕಗಳ ಮೇಲಿನ ಮೂರು ಬಗೆಯ ಆಸೆಗಳನ್ನು ತ್ಯಾಗ ಮಾಡಬೇಕು. ನಂತರ, ಆತ್ಮಜ್ಞಾನದಲ್ಲಿಯೇ ನೆಲೆಗೊಂಡು, ತನ್ನನ್ನು ತಾನು ಕಾಪಾಡಿಕೊಳ್ಳಬೇಕು. ಇದೇ ಮೊದಲನೆಯ ವೇದಮಂತ್ರದ (ಉಪನಿಷತ್ತಿನ ಮೊದಲನೆಯ ಮಂತ್ರದ) ಅರ್ಥ. ಈಗ ಬೇರೆ ಬಗೆಯವನು, ಅಂದರೆ ಆತ್ಮಜ್ಞಾನಿಯಾಗಿರದ ಕಾರಣ, ಆತ್ಮವನ್ನು ತಿಳಿದುಕೊಳ್ಳುವ ಶಕ್ತಿ ಇಲ್ಲದೆ ಇರುವ ಅಜ್ಞಾನಿಯನ್ನು ಕುರಿತು ಎರಡನೆಯ ಮಂತ್ರವು ಹೀಗೆ ಉಪದೇಶಿಸುತ್ತದೆ:

ಟಿಪ್ಪಣಿ: ಇಲ್ಲಿ ಶ್ರೀಶಂಕರಾಚಾರ್ಯರು ಆತ್ಮಜ್ಞಾನಕ್ಕೆ ಅರ್ಹರಾದವರ ಜೀವನಮಾರ್ಗವನ್ನು ಮೊದಲ ಮಂತ್ರವು ಸೂಚಿಸುತ್ತದೆ ಎಂದು ಹೇಳುತ್ತಾರೆ. ಅಂಥವರು ಏಷಣಾತ್ರಯಗಳನ್ನು (ಪುತ್ರರನ್ನು ಪಡೆಯುವ ಆಸೆ, ಧನವನ್ನು ಹೊಂದುವ ಆಸೆ ಮತ್ತು ಲೋಕಗಳನ್ನು ಪಡೆದುಕೊಳ್ಳುವ ಆಸೆ) ತ್ಯಾಗಮಾಡಿ, ತಾವು ಪಡೆದುಕೊಂಡ ಆತ್ಮಜ್ಞಾನದ ಉನ್ನತ ಹಂತದಲ್ಲಿಯೇ ತಮ್ಮ ಮನಸ್ಸನ್ನು ನೆಲೆಗೊಳಿಸಿಕೊಂಡು ಜೀವನವನ್ನು ನಡೆಸಬೇಕು. ಈ ಮೂಲಕ ಅವರು ತಮ್ಮನ್ನು ತಾವು ಕಾಪಾಡಿಕೊಂಡ ಹಾಗೆ ಆಗುತ್ತದೆ. ಇದಿಲ್ಲದೆ, ಮನಸ್ಸನ್ನು ಕೆಳಗೆ ಹರಿಯಲು ಬಿಟ್ಟರೆ, ಇದರಿಂದ ದೊಡ್ಡ ನಷ್ಟವಾಗುತ್ತದೆ. ಇದನ್ನೇ ಕಠೋಪನಿಷತ್ತು, 'ಪ್ರಮಾದ' ಎಂದು ಕರೆಯುತ್ತದೆ.

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ।**
**ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥ ॥ ೨ ॥**

**ಇಹ** = ಈ ಲೋಕದಲ್ಲಿ **ಕರ್ಮಾಣಿ** = ಕರ್ಮಗಳನ್ನು **ಕುರ್ವನ್ ಏವ** = ಮಾಡುತ್ತಲೇ **ಶತಂ** = ನೂರು **ಸಮಾಃ** = ವರುಷಗಳ ಕಾಲ **ಜಿಜೀವಿಷೇತ್** = ಜೀವಿಸಲು ಇಚ್ಛಿಸಬೇಕು. **ಏವಂ** = ಹೀಗೆ **ನರೇ ತ್ವಯಿ** = ಮನುಷ್ಯನಾದ ನಿನಗೆ **ಇತಃ** = ಈ ಕರ್ಮಗಳನ್ನು ಮಾಡುವುದಕ್ಕಿಂತ **ಅನ್ಯಥಾ** = ಬೇರೆಯಾದ (ಜೀವನ ವಿಧಾನ) **ನ ಅಸ್ತಿ** = ಸಾಧ್ಯವಿಲ್ಲ (ಏಕೆಂದರೆ, ಈ ರೀತಿಯ ಜೀವನವಿಧಾನದಿಂದ) **ಕರ್ಮ** = (ಕೆಟ್ಟ) ಕರ್ಮವು **ನ ಲಿಪ್ಯತೇ** = (ನಿನಗೆ) ಅಂಟಿಕೊಳ್ಳುವುದಿಲ್ಲ.

**ಭಾಷ್ಯ : ಕುರ್ವನ್ನೇವ ನಿರ್ವರ್ತಯನ್ನೇವ ಇಹ ಕರ್ಮಾಣಿ ಅಗ್ನಿಹೋತ್ರಾದೀನಿ ಜಿಜೀವಿಷೇತ್ ಜೀವಿತುಮ್ ಇಚ್ಛೇತ್ ಶತಂ ಶತ ಸಂಖ್ಯಾಕಾಃ ಸಮಾಃ ಸಂವತ್ಸರಾನ್ । ತಾವತ್ ಹಿ ಪುರುಷಸ್ಯ ಪರಮಾಯುಃ ನಿರೂಪಿತಮ್ । ತಥಾ ಚ ಪ್ರಾಪ್ತ ಅನುವಾದೇನ ಯತ್ ಜಿಜೀವಿಷೇತ್ ಶತಂ ವರ್ಷಾಣಿ ತತ್ ಕುರ್ವನ್ನೇವ ಕರ್ಮಾಣಿ ಇತಿ ಏತತ್ ವಿಧೀಯತೇ। ಏವಮ್ ಏವಂಪ್ರಕಾರೇ ತ್ವಯಿ ಜಿಜೀವಿಷತಿ ನರೇ ನರಮಾತ್ರ ಅಭಿಮಾನಿನಿ ಇತಃ ಏತಸ್ಮಾತ್ ಅಗ್ನಿಹೋತ್ರಾದೀನಿ ಕರ್ಮಾಣಿ ಕುರ್ವತಃ ವರ್ತಮಾನಾತ್ ಪ್ರಕಾರಾತ್ ಅನ್ಯಥಾ ಪ್ರಕಾರಾಂತರಂ ನ ಅಸ್ತಿ, ಯೇನ ಪ್ರಕಾರೇಣ ಅಶುಭಂ ಕರ್ಮ ನ ಲಿಪ್ಯತೇ ; ಕರ್ಮಣಾ ನ ಲಿಪ್ಯಸೇ ಇತ್ಯರ್ಥಃ। ಅತಃ ಶಾಸ್ತ್ರವಿಹಿತಾನಿ ಕರ್ಮಾಣಿ ಅಗ್ನಿಹೋತ್ರಾದೀನಿ ಕುರ್ವನ್ನೇವ ಜಿಜೀವಿಷೇತ್ ।**

**ಇಹ ಕರ್ಮಾಣಿ** – ಇಲ್ಲಿ ಅಂದರೆ ಈ ಮನುಷ್ಯ ಜೀವನದಲ್ಲಿ, ಕರ್ಮಗಳನ್ನು ಅಂದರೆ ಅಗ್ನಿಹೋತ್ರ ಮುಂತಾದವುಗಳನ್ನು **ಕುರ್ವನ್ನೇವ** – ಮಾಡುತ್ತಲೇ **ಶತಂ** – ನೂರು **ಸಮಾಃ** – ಸಂವತ್ಸರಗಳ (ವರ್ಷಗಳ) ಕಾಲ **ಜಿಜೀವಿಷೇತ್**– ಜೀವಿಸಲು

ಇಚ್ಛಿಸಬೇಕು. ನೂರು ವರ್ಷಗಳು ಎನ್ನುವುದು ಮನುಷ್ಯನೊಬ್ಬನು ಬಾಳುವ ಅತಿದೀರ್ಘ ಕಾಲದ ಆಯುಸ್ಸು ಎಂದು ನಿರ್ಧಾರಿತವಾಗಿದೆ. ಈ ಲೋಕರೂಢಿಯ ಮಾತನ್ನು ಇಟ್ಟುಕೊಂಡೇ ಉಪನಿಷತ್ತು, ನೂರು ವರ್ಷಗಳ ಕಾಲ ಜೀವಿಸುವುದಿದ್ದರೆ, ಕರ್ಮಗಳನ್ನು ಮಾಡುತ್ತಲೇ ಜೀವಿಸಬೇಕು ಎಂದು ಹೀಗೆ ವಿಧಿಸುತ್ತಿದೆ. **ಏವಮ್** – ಈ ಪ್ರಕಾರ **ನರೇ ತ್ವಯಿ** – 'ನಾನು ಮನುಷ್ಯಮಾತ್ರದವನು' ಎಂಬ ಅಭಿಮಾನವನ್ನು ಹೊಂದಿರುವ ವ್ಯಕ್ತಿಯಾದ ನಿನಗೆ **ಇತಃ** ಈಗಾಗಲೇ ಹೇಳಿರುವ ಅಗ್ನಿಹೋತ್ರ ಮುಂತಾದ ಕರ್ಮಗಳನ್ನು ಮಾಡುತ್ತ ಇರುವ ಜೀವನವಿಧಾನಕ್ಕಿಂತಲೂ **ಅನ್ಯಥಾ ನ ಅಸ್ತಿ** – ಬೇರೆ ಬಗೆಯ ಜೀವನಶೈಲಿ ಇಲ್ಲವೇ ಇಲ್ಲ. ಏಕೆಂದರೆ, ಈ ರೀತಿಯ ಜೀವನಯಾಪನೆಯಿಂದ ಮಾತ್ರವೇ ನಿನಗೆ ಕೆಟ್ಟ ಕರ್ಮಗಳು ತಟ್ಟುವುದಿಲ್ಲ. ಇದರ ಅರ್ಥ, ಯಾವುದೇ ರೀತಿಯ ಕರ್ಮಗಳೂ ನಿನಗೆ ಅಂಟಿಕೊಳ್ಳುವುದಿಲ್ಲ ಎಂದು. ಆದ್ದರಿಂದ, ಶಾಸ್ತ್ರಗಳು ಉಪದೇಶಿಸುವ ಅಗ್ನಿಹೋತ್ರ ಮುಂತಾದ ಕರ್ಮಗಳನ್ನು ಮಾಡುತ್ತಲೇ ನೀನು ಜೀವಿಸಲು ಇಚ್ಛಿಸಬೇಕು.

ಟಿಪ್ಪಣಿಗಳು: **ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್** = ಆತ್ಮಜ್ಞಾನವನ್ನು ಪಡೆದುಕೊಳ್ಳಲು ಸಾಧಕನ ಮನಸ್ಸು ಪರಿಶುದ್ಧವಾಗಿರಬೇಕು. ಇದನ್ನು ವೇದಾಂತದಲ್ಲಿ ಚಿತ್ತಶುದ್ಧಿ ಎನ್ನುತ್ತಾರೆ. ಚಿತ್ತಶುದ್ಧಿಯಿಂದ ಮಾತ್ರವೇ ಆತ್ಮನಲ್ಲಿ ಏಕಾಗ್ರಗೊಳಿಸುವ ಮಾನಸಿಕ ಶಕ್ತಿ ಉಂಟಾಗುತ್ತದೆ. ಆ ಮೂಲಕ ಹೊರಗೆ ತಮ್ಮ ತಮ್ಮ ವಿಷಯಗಳ ಕಡೆಗೆ ಹೋಗುವ ಇಂದ್ರಿಯಗಳನ್ನು ಒಳಕ್ಕೆ ಎಳೆದುಕೊಂಡು, ಮನಸ್ಸನ್ನು ಪೂರ್ಣವಾಗಿ ಆತ್ಮನಲ್ಲಿ ನೆಲೆಗೊಳಿಸಲು ಸಾಧ್ಯವಾಗುತ್ತದೆ. ಇದಕ್ಕೆ ಇನ್ನೂ ಅರ್ಹರಾಗದವರು ಕರ್ಮಗಳನ್ನು ಮಾಡುತ್ತ ಹೋಗಬೇಕು. ಆ ಮೂಲಕ ಚಿತ್ತಶುದ್ಧಿಯನ್ನು ಗಳಿಸಿಕೊಳ್ಳಬೇಕು. ಚಿತ್ತಶುದ್ಧಿಯಾದಾಗ, ಸಹಜವಾಗಿಯೇ ಜ್ಞಾನವನ್ನು ಪಡೆಯುವ ಅರ್ಹತೆ ಬರುತ್ತದೆ. ಶ್ರೀಶಂಕರಾಚಾರ್ಯರ ಪ್ರಕಾರ, ಮೊದಲನೆಯ ಮಂತ್ರವು ಜ್ಞಾನಕ್ಕೆ ಅರ್ಹರಾದವರು ಮಾಡಬೇಕಾದ ಕರ್ತವ್ಯವನ್ನು ಹೇಳುತ್ತದೆ. ಎರಡನೆಯ ಮಂತ್ರವು ಆತ್ಮಜ್ಞಾನಕ್ಕೆ ಅರ್ಹತೆಯನ್ನು ಪಡೆದುಕೊಳ್ಳುವ ಕರ್ಮಯೋಗದ ಮಾರ್ಗವನ್ನು ನಮಗೆ ತಿಳಿಸಿಕೊಡುತ್ತದೆ.

**ಏವಮ್ ನರೇ ತ್ವಯಿ** = ಈ ಮಾತಿನ ಮೇಲು ನೋಟದ ಅರ್ಥ, 'ಮನುಷ್ಯನಾದ ನಿನಗೆ' ಎಂದು. ಇದರ ಒಳಾರ್ಥವನ್ನು ಶ್ರೀ ಶಂಕರಾಚಾರ್ಯರು ನಮಗೆ ತಿಳಿಸಿಕೊಡುತ್ತಾರೆ. 'ನಾನು ದೇಹ-ಇಂದ್ರಿಯಗಳ ಒಕ್ಕೂಟವಾದ ಬರಡು ಮನುಷ್ಯ' ಎಂಬ ಭಾವನೆಯು ಅಜ್ಞಾನದ ಲಕ್ಷಣ. ಇಂಥವನಿಗೆ 'ನಾನು ಆತ್ಮ' ಎನ್ನುವ ನಿಜವಾದ ಅರಿವು ಇನ್ನೂ ಉಂಟಾಗಿರುವುದಿಲ್ಲ. ಅಂಥವನಿಗೆ ಕರ್ಮವೇ ಸಾಧನಾ ಮಾರ್ಗ. ಕರ್ಮವನ್ನು ಭಗವಂತನ ಆರಾಧನೆಯ ಭಾವದಿಂದ ಮಾಡುತ್ತ ಹೋದರೆ, ಅವನಿಗೆ ಚಿತ್ತಶುದ್ಧಿಯಾಗುತ್ತದೆ. ಇದರಿಂದ ಜ್ಞಾನಕ್ಕೆ ಅರ್ಹತೆ ಬರುತ್ತದೆ.

ಭಾಷ್ಯ : **ಕಥಂ ಪುನರಿದಮವಗಮ್ಯತೇ ? – ಪೂರ್ವೇಣ ಮಂತ್ರೇಣ ಸಂನ್ಯಾಸಿನಃ ಜ್ಞಾನನಿಷ್ಠಾ ಉಕ್ತಾ, ದ್ವಿತೀಯೇನ ತತ್ ಅಶಕ್ತಸ್ಯ ಕರ್ಮನಿಷ್ಠಾ ಇತಿ ?**

ಆಕ್ಷೇಪ : ಹಿಂದಿನ ಮಂತ್ರದ ಮೂಲಕ ಸಂನ್ಯಾಸಿಯು ಅನುಸರಿಸಬೇಕಾದ ಜ್ಞಾನನಿಷ್ಠೆಯನ್ನು ಉಪನಿಷತ್ತು ಉಪದೇಶಿಸುತ್ತದೆ, ಎರಡನೆಯ ಮಂತ್ರದ ಮೂಲಕ ಅದಕ್ಕೆ ಸಾಮರ್ಥ್ಯ ಇಲ್ಲದಿರುವವನಿಗೆ ಕರ್ಮದಲ್ಲಿ ನಿಷ್ಠೆಯನ್ನು ಉಪದೇಶಿಸುತ್ತದೆ ಎನ್ನುವ ನಿಮ್ಮ ಈ ಅಭಿಪ್ರಾಯವು ಹೇಗೆ ತಾನೇ ಸಮಂಜಸವಾದೀತು?

**ಉಚ್ಯತೇ – ಜ್ಞಾನಕರ್ಮಣೋಃ ವಿರೋಧಂ ಪರ್ವತವತ್ ಅಕಂಪ್ಯಂ ಯಥೋಕ್ತಂ ನ ಸ್ಮರಸಿ ಕಿಮ್ ? ಇಹಾಪಿ ಉಕ್ತಮ್ । ಯಃ ಹಿ ಜಿಜೀವಿಷೇತ್ ಸಃ ಕರ್ಮಾಣಿ ಕುರ್ವನ್ನೇವ ಇತಿ ; 'ಈಶಾ ವಾಸ್ಯಮಿದಂ ಸರ್ವಮ್', 'ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಮ್' ಇತಿ ಚ । 'ನ ಜೀವಿತೇ ಮರಣೇ ವಾ ಗೃಧಿಂ ಕುರ್ವೀತ ಅರಣ್ಯಮಿಯಾತ್ ಇತಿ ಪದಂ; ತತಃ ನ ಪುನರೇಯಾತ್' ( ? ) ಇತಿ ಚ ಸಂನ್ಯಾಸಶಾಸನಾತ್ । ಉಭಯೋಃ ಫಲಭೇದಂ ಚ ವಕ್ಷ್ಯತಿ । 'ಇಮೌ ದ್ವಾವೇವ ಪಂಥಾನೌ ಅನುನಿಷ್ಕ್ರಾಂತತರೌ ಭವತಃ ಕ್ರಿಯಾಪಥಶ್ಚ ಏವ ಪುರಸ್ತಾತ್ ಸಂನ್ಯಾಸಶ್ಚ' ( ? ); ತಯೋಃ ಸಂನ್ಯಾಸಪಥ ಏವ ಅತಿರೇಚಯತಿ । 'ನ್ಯಾಸ ಏವಾ ಅತ್ಯರೇಚಯತ್' (ನಾರಾಯಣ ಉಪನಿಷತ್. ೭೮) ಇತಿ ತೈತ್ತಿರೀಯಕೇ । 'ದ್ವಾವಿಮಾವಥ ಪಂಥಾನೌ ಯತ್ರ ವೇದಾಃ ಪ್ರತಿಷ್ಠಿತಾಃ । ಪ್ರವೃತ್ತಿಲಕ್ಷಣೋ ಧರ್ಮೋ ನಿವೃತ್ತಶ್ಚ ವಿಭಾವಿತಃ' (ಮೋಕ್ಷಧರ್ಮಪರ್ವ, ೨೪೧.೬) ಇತ್ಯಾದಿ ಪುತ್ರಾಯ ವಿಚಾರ್ಯ ನಿಶ್ಚಿತಮ್ ಉಕ್ತಂ ವ್ಯಾಸೇನ ವೇದಾಚಾರ್ಯೇಣ ಭಗವತಾ । ವಿಭಾಗಂ ಚ ಅನಯೋಃ ಪ್ರದರ್ಶಯಿಷ್ಯಾಮಃ ।**

ಇದಕ್ಕೆ ಉತ್ತರವನ್ನು ಹೇಳುತ್ತೇವೆ. ಜ್ಞಾನ ಮತ್ತು ಕರ್ಮಗಳ ನಡುವಣ ವೈಪರೀತ್ಯವು ಪರ್ವತದಂತೆ ಅಲುಗಾಡಿಸಲು ಸಾಧ್ಯವಿಲ್ಲದ್ದು ಎಂದು ನಾವು ಹಿಂದೆಯೇ ಉಪೋದ್ಘಾತದಲ್ಲಿ ಹೇಳಿದ್ದನ್ನು ನೀನು ನೆನಪಿನಲ್ಲಿ ಇಟ್ಟುಕೊಂಡಿಲ್ಲವೇನು? ಇಲ್ಲಿ ಹೇಳಿರುವುದೂ ಅದನ್ನೇ: 'ಯಾವನು ಜೀವಿಸಲು ಇಚ್ಛಿಸುತ್ತಾನೆಯೋ, ಅವನು ಕರ್ಮಗಳನ್ನು ಮಾಡುತ್ತಲೇ ಜೀವಿಸಬೇಕು'; 'ಪರಮಾತ್ಮತತ್ತ್ವದಿಂದಲೇ ಇವೆಲ್ಲವನ್ನೂ ಮುಚ್ಚಿಬಿಡಬೇಕು'; 'ಈ ರೀತಿಯ ತ್ಯಾಗದಿಂದ ನಿನ್ನನ್ನು ನೀನು ಕಾಪಾಡಿಕೋ' ; ಯಾರ ಸಂಪತ್ತಿಗೂ ಆಶೆ ಪಡಬೇಡ' ಎಂದು. (ಇದು ಕರ್ಮಗಳಿಗೆ ಅರ್ಹರಾದ ಸಾಧಾರಣ ಜನರಿಗೆ ನೀಡಿರುವ ಉಪದೇಶ) ಇದೇ ರೀತಿ

ಜ್ಞಾನನಿಷ್ಠರಾದ ಸಂನ್ಯಾಸಿಗಳಿಗೆ ಕೂಡ ಶಾಸ್ತ್ರದಲ್ಲಿ ಒಂದು ವಿಧಿ ಇದೆ. ಅದು ಹೀಗೆ ಹೇಳುತ್ತದೆ: 'ಜೀವಿಸುವುದಕ್ಕಾಗಲಿ, ಸಾಯುವುದಕ್ಕಾಗಲಿ ಇಚ್ಛೆಯನ್ನು ಮಾಡಬಾರದು. ಅರಣ್ಯವನ್ನು ಹೋಗಿ ಸೇರಬೇಕು. ಇದೇ ಸಂನ್ಯಾಸದ ಮಾರ್ಗ. ಈ ಮಾರ್ಗದಿಂದ ಮತ್ತೆ ತಿರುಗಿ ಬರಬಾರದು.' ಇದಲ್ಲದೆ ಇವೆರಡು ಮಾರ್ಗಗಳ ಫಲಗಳಲ್ಲಿಯೂ ಇರುವ ಭೇದವನ್ನು ಇದೇ ಉಪನಿಷತ್ತು ತನ್ನ ೭ ಮತ್ತು ೮ನೆಯ ಮಂತ್ರಗಳಲ್ಲಿ ಮುಂದೆ ಸ್ಪಷ್ಟಪಡಿಸುತ್ತದೆ. ಹಾಗೂ ಶಾಸ್ತ್ರದಲ್ಲಿ ಇನ್ನೊಂದು ಮಾತು ಬರುತ್ತದೆ: 'ಸೃಷ್ಟಿಯ ನಂತರ ಹೊರಬಂದಿರುವುದು ಎರಡೇ ಮಾರ್ಗಗಳು. ಮೊದಲು ಬಂದಿರುವುದು ಕರ್ಮದ ಮಾರ್ಗ. ಅನಂತರ ಹೊರಹೊಮ್ಮಿರುವುದು ನಿವೃತ್ತಿಮಾರ್ಗದ ಮೂಲಕ ಮೂರು ಏಷಣೆ (ಆಸೆ)ಗಳನ್ನು ತ್ಯಾಗ ಮಾಡುವುದು. ಇವೆರಡರಲ್ಲಿ ಸಂನ್ಯಾಸ ಮಾರ್ಗವೇ ಶ್ರೇಷ್ಠವಾದುದು.' ಇದಲ್ಲದೆ, ತೈತ್ತಿರೀಯ ಆರಣ್ಯಕದಲ್ಲಿ ಹೀಗೆ ಹೇಳಿದೆ : 'ಸಂನ್ಯಾಸವೇ ಹೆಚ್ಚಿನದು' (ಮಹಾನಾರಾಯಣ ಉಪನಿಷತ್ತು, ೭೮). ಭಗವಾನ್ ವ್ಯಾಸರು ವೇದಾಚಾರ್ಯರು. ಅವರು ವಿಚಾರಮಾಡಿ, ತಮ್ಮ ಮಗನಾದ ಶ್ರೀ ಶುಕಮುನಿಗಳಿಗೆ ನಿಶ್ಚಿತವಾಗಿ ಹೀಗೆ ಹೇಳಿದ್ದಾರೆ: 'ವೇದಗಳು ಪ್ರತಿಷ್ಠಿತವಾಗಿರುವುದು ಎರಡು ಮಾರ್ಗಗಳಲ್ಲಿ. ಒಂದು ಪ್ರವೃತ್ತಿ ಅಂದರೆ ಕರ್ಮರೂಪವಾಗಿರುವ ಧರ್ಮ. ಇನ್ನೊಂದು ನಿವೃತ್ತಿ ಅಂದರೆ ಸಂನ್ಯಾಸಮಾರ್ಗದ ಧರ್ಮ.' ನಾವು (ಭಾಷ್ಯಕಾರರು) ಈ ಎರಡು ಮಾರ್ಗಗಳ ನಡುವಣ ವ್ಯತ್ಯಾಸವನ್ನು ಮುಂದೆ ಎತ್ತಿತೋರಿಸುತ್ತೇವೆ.

ಟಿಪ್ಪಣಿಗಳು: **ಜ್ಞಾನಕರ್ಮಣೋಃ ವಿರೋಧಂ :** ಜ್ಞಾನ ಮತ್ತು ಕರ್ಮಗಳ ವೈಪರೀತ್ಯವನ್ನು ಉಪನಿಷತ್ತಿನ ಮೊದಲ ಎರಡು ಮಂತ್ರಗಳು ಹೇಳುತ್ತವೆ ಎಂದು ಹೇಗೆ ತಾನೇ ಪ್ರತಿಪಾದನೆ ಮಾಡುತ್ತೀರಿ? ಎಂಬ ಶಂಕೆಯನ್ನು ಕೆಲವರು ಮಾಡಬಹುದು. ಇದನ್ನು ಶ್ರೀಶಂಕರಾಚಾರ್ಯರು ಹೀಗೆ ಸಮರ್ಥಿಸಿಕೊಳ್ಳುತ್ತಾರೆ: ಜ್ಞಾನನಿಷ್ಠೆಯ ಉನ್ನತ ಸ್ಥಿತಿ ಮತ್ತು ಕರ್ಮ ಮಾಡುವ ಹಂತ ಇವುಗಳ ನಡುವಿನ ವಿರೋಧವನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ. ಏಕೆಂದರೆ, ಆತ್ಮಜ್ಞಾನದ ಸ್ಥಿತಿಯಲ್ಲಿ ಕರ್ಮ ಮಾಡಲು ಅತ್ಯಾವಶ್ಯಕವಾಗಿರುವ ಕರ್ತೃತ್ವ ಭಾವ (ನಾನು ಕರ್ಮ ಮಾಡುತ್ತೇನೆ ಎಂಬ ಭಾವನೆ) ಮತ್ತು ಭೋಕ್ತೃತ್ವ ಭಾವ (ನಾನು ಕರ್ಮಫಲವನ್ನು ಭೋಗಿಸುತ್ತೇನೆ ಎಂಬ ಭಾವ) – ಇವೆರಡೂ ಇರುವುದಿಲ್ಲ. ಹೀಗಾಗಿ ಸಾಮಾನ್ಯ ಜನರಂತೆ ಆಸೆಗಳಿಂದ ಪ್ರೇರಿತನಾಗಿ ಕರ್ಮಗಳನ್ನು ಮಾಡಲು ಸಾಧ್ಯವಿಲ್ಲ. ಅದು ಸಾಧ್ಯವಾಗುವುದು ಕೆಳಗಿನ ಹಂತದಲ್ಲಿ ಮಾತ್ರ. ಆಗ ಮನುಷ್ಯನು 'ದೇಹ-ಇಂದ್ರಿಯಗಳೇ ನಾನು' ಎಂಬ ತಾದಾತ್ಮ್ಯವನ್ನು ಬೆಳೆಸಿಕೊಂಡಿರುತ್ತಾನೆ. ದೇಹ, ಇಂದ್ರಿಯಗಳಿಂದ ಉಂಟಾಗುವ ಕರ್ಮಗಳನ್ನು ನಾನೇ ಮಾಡಿದ್ದು ಎಂದು ತಪ್ಪು ತಿಳಿವಳಿಕೆ ಹೊಂದಿರುತ್ತಾನೆ. ಆಗ ಮಾತ್ರ ಕರ್ಮಗಳನ್ನು ಮಾಡಲು ಸಾಧ್ಯ.

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



❋ *(ತುಂಬ ಸಡಗರದಿಂದ ವೇಷಭೂಷಣ ಧರಿಸಿಕೊಂಡು ಬಂದಿದ್ದ ಒಬ್ಬಾಕೆಗೆ)* ನೋಡಮ್ಮಾ, ಸ್ತ್ರೀಗೆ ಲಜ್ಜೆಯೇ ಭೂಷಣ. ಹೂವನ್ನು ದೇವರ ಪೂಜೆಗೆ ಉಪಯೋಗಿಸುವುದೇ ಎಲ್ಲದಕ್ಕಿಂತಲೂ ಉತ್ತಮ. ಇಲ್ಲದೆ ಹೋದರೆ ಅದು ಗಿಡದಲ್ಲೇ ಒಣಗಿ ಹೋದರೆ ಒಳ್ಳೆಯದು. ಶೋಕಿಗಳು ಹೂವಿನ ಗುಚ್ಛ ಮಾಡುವುದು, ಅಥವಾ ಯಾವಾಗಲಾದರೂ ಅದನ್ನು ಕೈಯಲ್ಲಿ ಹಿಡಿದುಕೊಂಡು ಮೂಗಿನ ಬಳಿ ತಂದು ಮೂಸಿ ನೋಡಿ, ''ಆಃ ! ಎಷ್ಟೊಂದು ಒಳ್ಳೆಯ ವಾಸನೆ!'' ಎನ್ನುವುದನ್ನು ನೋಡಿ ನನಗೆ ತುಂಬ ಸಂಕಟವಾಗುತ್ತದೆ.

❋ ಇದೇನಿದು? ಒಬ್ಬರ ಮನಸ್ಸಿಗೆ ನೋವಾಗುವಂತೆ ಮಾತನಾಡಬಹುದೆ? ಹೇಳುವ ಮಾತು ಸತ್ಯವೇ ಆಗಿದ್ದರಬಹುದು; ಆದರೆ ಅದು ಅಪ್ರಿಯವಾಗಿದ್ದರೆ ಹೇಳಬಾರದು. ಕೊನೆಗೆ ಅದೇ ಸ್ವಭಾವವಾಗಿಬಿಡುವುದು. ಜನ ಶಿಷ್ಟಾಚಾರ ಬಿಟ್ಟುಬಿಟ್ಟರೆ ನಾಲಗೆ ಏನನ್ನಾದರೂ ಆಡಲು ಹೇಸುವುದಿಲ್ಲ. ಶ್ರೀರಾಮಕೃಷ್ಣರು ಹೇಳುತ್ತಿದ್ದರು, ''ಒಬ್ಬಾತ ಹೆಳವನಿಗೆ 'ನೀನು ಹೇಗೆ ಹೆಳವನಾದೆ' ಎಂದು ಕೇಳಬೇಕಾಗಿದ್ದರೆ, 'ನಿನ್ನ ಕಾಲು ಹೀಗೆ ಈ ರೀತಿ ಬಾಗಿಹೋಯಿತು?' ಎನ್ನಬೇಕು'' ಅಂತ.

❋ ಅಷ್ಟೊಂದು ಆಗ್ರಹದಿಂದ ಒತ್ತಾಯಿಸಿ ಅವರು (ಭಕ್ತರು) ಮಂತ್ರದೀಕ್ಷೆ ಪಡೆದುಕೊಂಡು ಹೋದರು, ಆದರೆ ಸ್ವಲ್ಪವೂ ಸಾಧನೆ ಮಾಡಲಾರರು ಏಕೆ? ಅದನ್ನು ಮಾಡಲು ಅಷ್ಟೊಂದು ಕಷ್ಟವೆ? ಸ್ವಲ್ಪ ಅಭ್ಯಾಸ ಮಾಡುವುದರಿಂದಲೂ ಎಂಥ ಆನಂದ ವುಂಟಾಗುವುದು ! ಆಹಾ, ಯೋಗಿನ್ ಮತ್ತು ನಾನು ವೃಂದಾವನದಲ್ಲಿ ಆನಂದದಿಂದ ಎಷ್ಟೊಂದು ಜಪ ಮಾಡುತ್ತಿದ್ದೆವು ! ಕಣ್ಣು, ಬಾಯಿಯ ಮೇಲೆಲ್ಲ ಸೊಳ್ಳೆ ಬಂದು ಕುಳಿತು ಕಡಿಯುತ್ತಿದ್ದರೂ ನಮಗೆ ಅದರ ಪ್ರಜ್ಞೆಯಿರುತ್ತಿರಲಿಲ್ಲ.

❋ ಇಷ್ಟೊಂದು ಜಪ ಮಾಡಿದೆ ಅನ್ನು, ಅಥವಾ ಇಷ್ಟೊಂದು ಕೆಲಸ ಮಾಡಿದೆ ಅನ್ನು — ಅದು ಏನೇನೂ ಅಲ್ಲ. ಮಹಾಮಾಯೆ ದಾರಿ ಬಿಟ್ಟುಕೊಡದಿದ್ದರೆ ಯಾರಿಗೆ ಏನು ಮಾಡಲಾದೀತು? ಹೇ ಜೀವ, ಶರಣಾಗತನಾಗು. ಕೇವಲ ಶರಣಾಗತನಾಗು. ಆಗ ಮಾತ್ರ ಮಹಾಮಾಯೆ ದಾರಿಬಿಟ್ಟುಕೊಡುವಳು.

*('ಶ್ರೀಶಾರದಾದೇವಿ ವಚನವೇದ', ಪು. ೫೫೭)*